**<u>ದಿಃ12.12.2025 ರ ಆದೇಶದ ಮೇರೆಗೆ ಸಾಕ್ಷಿಯನ್ನು ಕರೆಸಿ</u>**

**<u>ದಿಃ16.02.2026 ರಂದು ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಲ್ ಎಸ್ ಕೆ ವಕೀಲರಿಂದಃ</u>**

5. ಹುಚ್ಚ ಹನುಮಕ್ಕ ನನ್ನ ತಂದೆಯ ತಾಯಿ. ನನ್ನ ತಂದೆ ಮುನಿವೆಂಕಟಪ್ಪ ಹಾಗು ಅಜ್ಜಿ ಹುಚ್ಚಹನುಮಕ್ಕ ಇವರ ಹೆಸರಿನಲ್ಲಿ ಚಿಕ್ಕಸಂದ್ರ ಗ್ರಾಮದ ಸರ್ವೆ ನಂಬರ್ 45 ರಲ್ಲಿ 8 ಗುಂಟೆ ಜಮೀನು ಇತ್ತು ಎಂದರೆ ಸರಿ. ಸದರಿ ಜಮೀನನ್ನು ನನ್ನ ತಂದೆ ಮತ್ತು ಅಜ್ಜಿ 1 ನೇ ಆರೋಪಿಯ ಮಾವನವರಾದ ವೆಂಕಟರಮಣಯ್ಯ ಇವರಿಗೆ 4 ಗುಂಟೆ ಜಮೀನನ್ನು ದಿಃ23.04.1990 ರಂದು ಮೂವತ್ತು ಸಾವಿರ ರೂಪಾಯಿ ಪಡೆದು ಶುದ್ದ ಕ್ರಯ ಪತ್ರ ಮಾಡಿಕೊಡಲು ಒಪ್ಪಿ ಜಿಪಿಎ ಮತ್ತು ಪ್ರಮಾಣ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ಸದರಿ ಜಿಪಿಎ ಹಾಗೂ ಪ್ರಮಾಣ ಪತ್ರದ ದೃಡೀಕೃತ ನಕಲುಗಳನ್ನು ತೋರಿಸಿ ಈ ದಾಖಲಾತಿಗಳನ್ನು ಸಿವಿಲ್ ದಾವೆಯಲ್ಲಿ ಹಾಜರು ಮಾಡಲಾಗಿದೆ ಎಂದು ಕೇಳಲಾಗಿ ಸಾಕ್ಷಿ ಅದು ನನಗೆ ಗೊತ್ತಿಲ್ಲ, ಕೇಳಬೇಕು ಎಂದು ಹೇಳುತ್ತಾರೆ. ಸದರಿ ಅಸಲುದಾವಾ ಸಂಖ್ಯೆ 25357/2016 ಯನ್ನು ನನ್ನ ತಂದೆಯವರು ಹಾಕಿದ್ದು ಅವರ ಮರಣದ ನಂತರ ಅದನ್ನು ನಾನೇ ನಡೆಸುತ್ತಿದ್ದೇನೆ. ಸಾಕ್ಷಿಗೆ ಸದರಿ ದಾಖಲಾತಿಯನ್ನು ತೋರಿಸಲಾಗಿ ನಾನು 3 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ, ನನಗೆ ಅಷ್ಟಾಗಿ ಓದಲು ಬರುವುದಿಲ್ಲ ಎಂದು ಹೇಳುತ್ತಾರೆ.

6. ದಿಃ10.05.1996 ರಂದು ಸದರಿ ಜಮೀನನ್ನು ನನ್ನ ತಂದೆ ಮತ್ತು ನನ್ನ ಅಜ್ಜಿಯು 1 ನೇ ಆರೋಪಿಯ ಕಡೆಯಿಂದ ಐವತ್ತು ಸಾವಿರ ರೂಪಾಯಿ ಪಡೆದುಕೊಂಡು ಶುದ್ದ ಕ್ರಯ ಮಾಡುವುದಾಗಿ ಪ್ರಮಾಣ ಪತ್ರ ಮತ್ತು ಹಣ ಸಂದಾಯ ರಶೀದಿಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲಾತಿಗಳನ್ನು ಅಸಲುದಾವಾ ಸಂಖ್ಯೆ 25357/2016 ರಲ್ಲಿ ಹಾಜರುಪಡಿಸಿ ನಿಪಿ-9 ಮತ್ತು 10 ರಂತೆ ಗುರುತಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ವಕೀಲರು ಆ ಬಗ್ಗೆ ನನಗೆ ಹೇಳಿರುವುದಿಲ್ಲ ಎಂದು

ಹೇಳುತ್ತಾರೆ. ದಿಃ10.05.1996 ರಂದು ನೊಂದಾಯಿತ ಜಿಪಿಎಯನ್ನು ನನ್ನ ಅಜ್ಜಿ ಹಾಗೂ ನನ್ನ ತಂದೆ 1 ನೇ ಆರೋಪಿಗೆ ಬರೆದು ನೊಂದಾಯಿಸಿ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ದಾಖಲಾತಿಯು 420 ಪ್ರಕರಣದಲ್ಲಿ ಕ್ಯಾನ್ಸಲ್ ಆಗಿರುತ್ತದೆ ಹಾಗೂ ನಾವು ಅವರ ಹಣವನ್ನು ಸದರಿ ಪ್ರಕರಣದಲ್ಲಿ ಜಮಾ ಮಾಡಿರುತ್ತೇವೆ ಎಂದು ಹೇಳುತ್ತಾರೆ. ದಿಃ15.02.2016 ರಂದು 1 ನೇ ಆರೋಪಿಯು ಆತನ ಮಗನಿಗೆ ಖರೀದಿ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದಕ್ಕೆ ಸಂಬಂಧಪಟ್ಟಂತೆ ಸದರಿ ಸಿವಿಲ್ ಪ್ರಕರಣ ನಡೆಯುತ್ತಿದೆ ಎಂದು ಹೇಳುತ್ತಾರೆ. 1 ನೇ ಆರೋಪಿ ಹಾಗೂ ಅವರ ಕುಟುಂಬದವರು ಸದರಿ ನಾಲ್ಕು ಗುಂಟೆ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾವು ಅದರ ಸ್ವಾಧೀನದಲ್ಲಿ ಇದ್ದಾರೆ ಎಂದು ಸಾಕ್ಷಿ ಮುಂದುವರಿದು ಹೇಳುತ್ತಾರೆ. ಉಳಿದ ನಾಲ್ಕು ಗುಂಟೆ ಜಮೀನನ್ನು ನಾವು ಗೌರೀಶ ಎನ್ನುವವರಿಗೆ ಬರೆದುಕೊಟ್ಟಿದ್ದು ಅವರು ಸದರಿ ಜಮೀನಿನಲ್ಲಿ ಅಂಗಡಿಗಳನ್ನು ಇಟ್ಟುಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅವರು ಸಹ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ನನಗಾಗಲೀ ಅಥವಾ ನನ್ನ ತಂದೆಗಾಗಲೀ ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ಹಕ್ಕು ಅಥವಾ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

7. ಸದರಿ ಜಮೀನಿನ ಸಂಬಂಧದಲ್ಲಿ ನನ್ನ ತಂದೆ ಮೇಯೊಹಾಲ್ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಅಸಲುದಾವಾ ಸಂಖ್ಯೆ 26311/2009 ರಲ್ಲಿ ವೆಂಕಟರಮಣಪ್ಪ, 1 ನೇ ಆರೋಪಿ, ಲಕ್ಷ್ಮಮ್ಮ, ವೆಂಕಟಪ್ಪ, ಮೂರ್ತಿ ಹಾಗೂ ಗೌರೀಶ್ ಇವರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಗಾಗಿ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಪಕ್ಷಗಾರರ ನಡುವೆ ರಾಜಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ತಂದೆಯವರು ಒಂದು ಲಕ್ಷ ರೂಪಾಯಿ ಹಾಗೂ ಮುನಿವೆಂಕಟಮ್ಮ ಇಪ್ಪತ್ತೈದು ಸಾವಿರ ರೂಪಾಯಿ ಹಣವನ್ನು 1 ನೇ ಆರೋಪಿಯಿಂದ ಪಡೆದಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸದರಿ ಹಣವನ್ನು ಬಡ್ಡಿ ಸಮೇತ ಎರಡು ಲಕ್ಷ ರೂಪಾಯಿಯನ್ನು ನ್ಯಾಯಾಲಯದ ಆದೇಶದ ಮೇರೆಗೆ ಜಮಾ ಮಾಡಿರುತ್ತೇವೆ ಎಂದು ಹೇಳುತ್ತಾರೆ. ಈ ಜಮೀನಿಗೆ ಸಂಬಂಧಪಟ್ಟಂತೆ ನಾನು, ನನ್ನ ತಂದೆ

ಹಾಗೂ ನನ್ನ ಕುಟುಂಬದವರು ನೊಂದಾಯಿತ ಎಂಓಯು ವನ್ನು 1 ನೇ ಆರೋಪಿಗೆ ಬರೆದುಕೊಟ್ಟಿದ್ದೇವೆ ಎಂದರೆ ಸಾಕ್ಷಿಯು 25 ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳಿ 1 ಲಕ್ಷದ 25 ಸಾವಿರ ಹಣ ನೀಡಿ ಮೋಸದಿಂದ ನಮ್ಮ ಕಡೆಯಿಂದ ಸಹಿ ಪಡೆದಿದ್ದಾರೆ ಎಂದು ಹೇಳುತ್ತಾರೆ. ಸದರಿ ಅಸಲುದಾವಾ ಸಂಖ್ಯೆ 26311/2009 ಇದನ್ನು ನಂತರ ನಾವು ದಿಃ03.09.2018 ರಂದು ವಾಪಸ್ಸು ಪಡೆದಿರುತ್ತೇವೆ ಎಂದರೆ ಸರಿಯಲ್ಲ.

8. ದಿಃ28.12.2015 ರಂದು ನನ್ನ ತಂದೆ ಮುನಿವೆಂಕಟಪ್ಪ, ನಾನು, ನಾಗರಾಜು, ಶ್ರೀನಿವಾಸ, ತಿಮ್ಮಕ್ಕ, ಅಕ್ಕಯ್ಯಮ್ಮ, ತಾಯಮ್ಮ, ಸಿದ್ದಲಿಂಗಪ್ಪ ಮತ್ತು ರಾಜೇಶ್ ಇವರುಗಳು ಸರ್ವೆ ನಂಬರ್ 45 ರ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡಿ 1 ನೇ ಆರೋಪಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಬಗ್ಗೆ ಕ್ರೈಂ ನಂ.49/2016 ರಂತೆ ನಮ್ಮಗಳ ಮೇಲೆ 1 ನೇ ಆರೋಪಿಯು ದೂರು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯವು ರದ್ದು ಮಾಡಿರುತ್ತದೆ ಎಂದು ಹೇಳುತ್ತಾರೆ. ಸದರಿ ಪ್ರಕರಣದಲ್ಲಿ ಸಿಜೆಎಂ ನ್ಯಾಯಾಲಯದಲ್ಲಿ ಸಿಸಿ 148/2017 ರಲ್ಲಿ ವಿಚಾರಣೆ ನಡೆದು ನಿಮಗೆ ಶಿಕ್ಷೆಯಾಗಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಜಿಲ್ಲಾ ನ್ಯಾಯಾಲಯದಲ್ಲಿ ನಾವು ಅಪೀಲು ಬಂದು ಅದು ನಮ್ಮ ಪರವಾಗಿ ಆದೇಶವಾಗಿದ್ದು ನಂತರ ಅವರು ಸದರಿ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದು ಅಲ್ಲಿಯೂ ಸಹ ಅವರ ಮೇಲ್ಮನವಿ ವಜಾ ಆಗಿರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನನ್ನ ತಂದೆ ಈ ಪ್ರಕರಣದಲ್ಲಿ ಯಾವ ದಿನಾಂಕದಂದು ದೂರು ನೀಡಿದ್ದಾರೆ ಎಂದು ನನಗೆ ಈಗ ಮರೆತು ಹೋಗಿದೆ. ದಿಃ31.12.2015 ರಂದು ನಾವುಗಳು ಬೆಳಗ್ಗೆ 9.00 ಘಂಟೆಗೆ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ 1 ನೇ ಆರೋಪಿಯ ಮೇಲೆ ಗಲಾಟೆ ಮಾಡಿ ನೀವೇನಾದರೂ ಈ ಜಾಗ ಬಿಟ್ಟುಕೊಡಲಿಲ್ಲ ಎಂದರೆ ನಿಮ್ಮ ಮೇಲೆ ಎಸ್ ಸಿ ಎಸ್ ಟಿ ದೌರ್ಜನ್ಯದ ಪ್ರಕರಣ ಹಾಕಿ ನಿಮ್ಮನ್ನು ಜೈಲಿಗೆ ಕಳುಹಿಸುತ್ತೇವೆಂದು ಬೆದರಿಕೆ ಹಾಕಿದ್ದೀರಿ

ಎಂದರೆ ಸರಿಯಲ್ಲ. ಇದರ ಸಂಬಂಧವಾಗಿ ಅದೇ ದಿನ ಮಧ್ಯಾಹ್ನ 12.30 ಘಂಟೆಗೆ 1 ನೇ ಆರೋಪಿಯು ನಮ್ಮಗಳ ಮೇಲೆ ಠಾಣೆಯಲ್ಲಿ ದೂರು ನೀಡಿದ್ದು ಅದು ಕ್ರೈಂ ನಂ.383/2015 ರಂತೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದೂರು ನೀಡಿದ್ದರಿಂದ ಅದಕ್ಕೆ ಪ್ರತೀಕಾರವಾಗಿ ಚಾಸಾ-1 ರವರ ಮುಖಾಂತರ ನಾನು ಈ ಸುಳ್ಳು ದೂರನ್ನು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ದೂರು ನೀಡಿರುವುದನ್ನು ಹೊರತುಪಡಿಸಿ ನಾನು ಠಾಣೆಯಲ್ಲಿ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಲಿತ ಸಂಘರ್ಷ ಸಮಿತಿಯ ಸದಸ್ಯನಲ್ಲ. ಸದರಿ ಜಮೀನನ್ನು ನಾವುಗಳು ಈಗಾಗಲೇ ಮಾರಾಟ ಮಾಡಿದ್ದು ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸಹ ನಾವೇ ಸದರಿ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡಿ ಅವರ ಜೊತೆಗೆ ಜಗಳ ಮಾಡಿದಾಗ 1 ನೇ ಆರೋಪಿ ನೀಡಿದ ದೂರಿನ ಪ್ರತೀಕಾರವಾಗಿ ನನ್ನ ತಂದೆಯವರ ಮೂಲಕ ಸುಳ್ಳು ದೂರನ್ನು ಕೊಡಿಸಿದ್ದೇನೆ ಎಂದರೆ ಸರಿಯಲ್ಲ.

10. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಿಃ31.12.2015 ರಂದು ಬೆಳಗ್ಗೆ ಸುಮಾರು 10.00 ಘಂಟೆಗೆ ಆರೋಪಿತರು ಜಮೀನಿಗೆ ಬಂದು ನಮಗೆ ಜಾತಿ ನಿಂದನೆ ಮಾಡಿ ಬೈದಿರುವುದಿಲ್ಲ ಹಾಗೂ ಅಂಬೇಡ್ಕರ್ ಇವರ ಭಾವಚಿತ್ರ ಇರುವ ಬೋರ್ಡ್ ಅನ್ನು ಕಿತ್ತು ಹಾಕಿರುವುದಿಲ್ಲ ಹಾಗೂ ಕಾಲಲ್ಲಿ ಒದ್ದಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಚಪ್ಪಲಿಯಿಂದ ನನ್ನ ತಂದೆಗೆ ಹೊಡೆದಿರುವುದಿಲ್ಲ ಹಾಗೂ ತಳ್ಳಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸಹ 1 ನೇ ಆರೋಪಿ ನೀಡಿದ ದೂರಿಗೆ ವಿರುದ್ದವಾಗಿ ನಾವು ಆರೋಪಿತರ ವಿರುದ್ದ ಈ ಸುಳ್ಳು ದೂರನ್ನು ನೀಡಿದ್ದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ನನ್ನ ತಂದೆಗೆ ಆರೋಪಿ ರಾಮೇಗೌಡ ಚಪ್ಪಲಿಯಿಂದ ನನ್ನ ತಂದೆಯ ತಲೆ ಬಗ್ಗಿಸಿ ಹೊಡೆದ, ನಮ್ಮನ್ನು ಸಹ ಆರೋಪಿತರು ತಳ್ಳಾಡಿದರು ಎಂದು ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಅವಾಚ್ಯ ಶಬ್ದದಿಂದ

ಸಹ ಬೈದರು. ಹುಣಸೇ ಹಣ್ಣನ್ನು ತೆಗೆದರೆ ನಮ್ಮನ್ನು ಸಾಯಿಸುತ್ತೇವೆಂದು ಸಹ ಆರೋಪಿತರು ಬೆದರಿಸಿದರು ಎಂದು ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು